ಶ್ರೀ ಡಿ. ದೇವರಾಜ್ ಅರಸ್]

ಸರಕಾರದ ಕಡೆಯಿಂದ ಸೂಚನೆಗಳನ್ನು ಕೊಟ್ಟು ಈ ಕೆಲಸಗಳನ್ನು ಮಾಡುತ್ತಿದ್ದಾರೆ, ಅವರಿಗೆ ಇದಕ್ಕಾಗಿ ನೀವು ಸತ್ಯಾಗ್ರಹ ಇಲ್ಲವೇ ಉಪವಾಸ ಮಾಡುವುದು ವಿಹಿತವಲ್ಲ ಎಂದು ತಾವೆಲ್ಲರೂ ಹೇಳಿ ಅವರನ್ನು ಒಪ್ಪಿಸಬಹುದು.

*Arrest and Release of a Member—Announcement*

MADAM SPEAKER:—I have received a communication from the Superintendent of Police, Mysore City that Sri Vatal Nagaraj, a member of the House, was arrested at 11.00 a.m. today *i.e.* 11th December under Section 151 of Cr.P.C. and that he will be released in due course when the situation returns to normalcy.

## REQUESTING SRI M. K. SURPUR TO BREAK HIS FAST.

2-30 P.M.

ಶ್ರೀ ಬಾಪೂಗೌಡ ರಾಯಪ್ಪ.— ಈ ಸಭೆಯ ಒಬ್ಬ ಸದಸ್ಯರು ಉಪವಾಸ ಕೈಕೊಂಡಿದ್ದಾರೆ. ಅವರ ಉಪವಾಸದಿಂದ ಮುಂದೆ ಆಗತಕ್ಕ ಗಂಡಾಂತರವನ್ನು ತಪ್ಪಿಸಬೇಕು. ಒಂದು ವೇಳೆ ಅಂಥ ಗಂಡಾಂತರ ಉಂಟಾದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಅವರು ಎರಡು ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ಅವರು ಸೀರಿಯಸ್ ಕಂಡೀಷನ್‌ನಲ್ಲಿದ್ದಾರೆಂದು ಗೊತ್ತಾಗಿದೆ. ಒಂದು ವೇಳೆ ಅವರು ಸತ್ತರೆ ಈ ಮನೆಗೆ ಅಪವಾದ ಬಂದೀತು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯ ಪರವಾಗಿ ಅವರು ಉಪವಾಸವನ್ನು ಕೈಬಿಡುವಂತೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜಿ. ಪಿ. ನಂಜಯ್ಯನಮಠ .— ಮಾನ್ಯ ಸದಸ್ಯರು ಹೇಳಿದುದನ್ನು ನಾನು ಅನುಮೋದನೆ ಮಾಡುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.— ನಮ್ಮ ಸಭೆಯ ಸದಸ್ಯರೊಬ್ಬರು ಉಪವಾಸ ಮಾಡುತ್ತಿರುವಾಗ ನಾವು ಸುಮ್ಮನೆ ಕುಳಿತುಕೊಳ್ಳಬೇಕು ಎಂದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಸಭೆಯಲ್ಲಿ ಧರಣಿ ಸತ್ಯಾಗ್ರಹ ಮಾಡಿದಾಗ ಕೊಟ್ಟಂಥ ಆಶ್ವಾಸನೆಯನ್ನು ಇನ್ನೂ ಈಡೇರಿಸಿಲ್ಲ.

ಅಧ್ಯಕ್ಷರು.— ಎಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ಮಾನ್ಯ ಸದಸ್ಯರನ್ನು ಆ ಭಾಗಕ್ಕೆ ಕಳುಹಿಸ ಲಾಗಿದೆ.

ಶ್ರೀ ಜಿ. ಎನ್. ಪಾಟೀಲ್.— ಮಾನ್ಯ ಸದಸ್ಯರಲ್ಲಿ ತಮ್ಮ ಮುಖೇನ ನನ್ನದು ಒಂದು ವಿನಂತಿ ಇದೆ. ನಿನ್ನೆ ದಿವಸ ನಾವು ಕೆಲವೊಂದು ಸಂಬಂಧಪಟ್ಟ ಮಂತ್ರಿಗಳನ್ನು ಕರೆತು ಮಾತನಾಡಿ ಒಂದು ವೀಟಿಂಗ್ ಕರೆದು ಪರಿಹಾರವನ್ನು ಕೈಕೊಳ್ಳಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ಅವರು ಏನು ಮಾಡುತ್ತಾರೆನ್ನುವುದನ್ನು ದಯಮಾಡಿ ತಿಳಿಸಬೇಕು.

ಅಧ್ಯಕ್ಷರು.— ನಿಮ್ಮ ನಿಮ್ಮಲ್ಲಿ ಚರ್ಚೆಯಾಗಿರಬಹುದಾದ ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ನನಗೆ ನೋಟೀಸ್ ಕೊಟ್ಟರೆ ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ. ನಾವು ಕೆಲವು ನಿಯಮಗಳ ಪ್ರಕಾರ ಕೆಲಸ ಮಾಡಬೇಕಾಗಿದೆ.

ಶ್ರೀ ಬಾಪೂಗೌಡ ರಾಯಪ್ಪ:— ಶ್ರೀ ಸಂಗಪುರ ಮಲ್ಲಪ್ಪನವರು ಬಹಳ ಸೀರಿಯಸ್ ಆಗಿದ್ದಾರೆ, ಅದರ ಬಗ್ಗೆ ಏನಾದರೂ ಮೊದಲು ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.— ಅವರನ್ನು ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಮಾಡಿಸೋಣ. ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದರೆ ಬರುವುದಿಲ್ಲವೆಂದು ಹೇಳಿದ್ದಾರೆ.

ಅವರು ಉಪವಾಸ ನಿಲ್ಲಿಸಲು ಇನ್ನೇನಾದರೂ ಕಾರಣಗಳಿವೆ ಎಂದು ಹೇಳಿದರೆ, ನನಗೇನಾದರೂ ಗೊತ್ತಾದರೆ ತಕ್ಷಣ ಕ್ರಮ ತೆಗೆದುಕೊಳ್ಳಲಾಗುವುದು ಏನಿದ್ದರೂ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.— ಶ್ರೀ ಬೈರೇಗೌಡ ಮತ್ತು ಪಾಟೀಲ್ ಇಬ್ಬರೂ ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯ ಮಂತ್ರಿಗಳು ಹೋಗಿ ಶ್ರೀ ಸುರಪುರ ಮಲ್ಲಪ್ಪನವರ ಹತ್ತಿರ ಮಾತನಾಡಲಿ ಎಂದು ಹೇಳಿದ್ದಾರೆ. ಇಬ್ಬರೂ ಹೋದರೆ ಬಹಳ ಸಂತೋಷ. ಅದಾಗದಿದ್ದರೆ ಮಾನ್ಯ ಮುಖ್ಯ ಮಂತ್ರಿಗಳೇ ಹೋಗಿ ಅವರ ಹತ್ತಿರ ಮಾತನಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್.— ನಮ್ಮ ಸಭೆಯ ಪರವಾಗಿ ಮಾನ್ಯ ಅಧ್ಯಕ್ಷರೇ ಹೋಗಿ ಅವರಿಗೆ ಹೇಳಿ ಬಂದರೆ ಸರಿಹೋಗುತ್ತದೆ.

ಶ್ರೀ ಸಿ. ಬೈರೇಗೌಡ.— ದಯವಿಟ್ಟು ಸಭೆಯನ್ನು ಅರ್ಧಗಂಟೆ ಮುಂದೂಡಿದರೆ ನಾವೆಲ್ಲ ಹೋಗಿ ಅವರನ್ನು ಪ್ರಾರ್ಥನೆ ಮಾಡೋಣ. ಅವರ ಜೀವಕ್ಕೆ ತೊಂದರೆಯಾಗುವ ಪರಿಸ್ಥಿತಿ ಇರುವುದರಿಂದ ಉಪವಾಸ ಬಿಡಬೇಕೆಂದು ಹೇಳೋಣ. ಅದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.— ಹಾಗೆ ಸಭೆಯನ್ನು ಮುಂದೂಡುವುದಕ್ಕೆ ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮುಖ್ಯ ಮಂತ್ರಿಗಳ ಸಲಹೆಯನ್ನು ತಾವು ಒಪ್ಪಿ ಕೊಂಡಿದ್ದೀರಿ ಎಂದು ತಿಳಿದುಕೊಳ್ಳಬೇಕಾಗಿದೆ. ನಮ್ಮೆಲ್ಲರ ಪರವಾಗಿ ತಾವು ಹೋಗಿ ಶ್ರೀ ಸುರಪುರ ಮಲ್ಲಪ್ಪನವರನ್ನು ಕೇಳಿಕೊಂಡು ಅವರು ಉಪವಾಸ ನಿಲ್ಲಿಸುವಂತೆ ಮಾಡಬಹುದು ಎಂದು ಹೇಳಿದರು ನನಗೆ ಅದಕ್ಕೆ ವಿರೋಧವಿಲ್ಲ. ಆ ಪ್ರಶ್ನೆ ಬಗೆಹರಿದರೆ ಬಹಳ ಸಂತೋಷ. ಇದರಲ್ಲಿ ರಾಜಕೀಯದ ಪ್ರಶ್ನೆ ಇಲ್ಲ. ಇದು ಬರಗಾಲದ ಪ್ರಶ್ನೆ ಮಾನ್ಯ ಮುಖ್ಯ ಮಂತ್ರಿಗಳ ಸಲಹೆಯನ್ನು ತಾವು ಒಪ್ಪಿ ಕೊಂಡರೆ ಸಂತೋಷ. ಅದರ ಬಗ್ಗೆ ತಾವು ಹೇಳಿದರೆ ನಾವು ಮುಂದಿನ ವಿಷಯಕ್ಕೆ ಹೋಗಬಹುದು.

ಅಧ್ಯಕ್ಷರು :—ಕೆಲಸ ನಡೆಯುತ್ತಿರಲಿ, ನಾನು ಹೋಗುವ ವಿಚಾರವನ್ನು ನೋಡೋಣ.

## (Demands of the Local Candidates)

ಶ್ರೀ ಎಂ. ಎಸ್. ಕೃಷ್ಣನ್ :—ನಾನು ತಮಗೆ ಒಂದು ನೋಟೀಸ್ ಕಳುಹಿಸಿದ್ದೆ. ಸ್ಥಳೀಯ ಅಭ್ಯರ್ಥಿಗಳನ್ನು, ಮೂರು ಸಹಸ್ರ ಜನರನ್ನು ಈ ತಿಂಗಳ ಅಂತ್ಯದಲ್ಲಿ ಕೆಲಸದಿಂದ ಕಿತ್ತು ಹಾಕುತ್ತಾರೆ. ಎಂದು ಅವರೆಲ್ಲರೂ ನಮಗೆ ತಿಳಿಸಿದ್ದಾರೆ. ಅದರಲ್ಲಿ ಡಾಕ್ಟರುಗಳಿದ್ದಾರೆ, ಇಂಜಿನಿಯರುಗಳಿದ್ದಾರೆ, ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುವವರಿದ್ದಾರೆ. ಈ ಪ್ರಶ್ನೆ ಬಹಳ ಕಠಿಣವಾಗಿದೆ. ಅವರಲ್ಲಿ ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಸರ್ವಿಸ್ ಮಾಡಿರುವವರಿದ್ದಾರೆ.

ಅಧ್ಯಕ್ಷರು :—ಇದರ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು ಎರಡೂವರೆ ಗಂಟೆ ಕಾಲದ ಚರ್ಚೆಗೆ ನೋಟೀಸ್ ಕೊಟ್ಟಿದ್ದಾರೆ. ಶ್ರೀ ಬಂಗಾರಪ್ಪನವರು ಕಾಲಿಂಗ್ ಅಟೆನ್ಷನ್ ನೋಟೀಸ್ ಸಹ ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ :—ಎರಡೂವರೆ ಗಂಟೆ ಕಾಲದ ಚರ್ಚೆ ಬಗ್ಗೆ ಅಥವಾ ಕಾಲಿಂಗ್ ಅಟೆನ್ಷನ್ ನೋಟೀಸ್ ಬಗ್ಗೆ ಏನು ಮಾಡಬೇಕೆಂಬುದು ತಮಗೆ ಬಿಟ್ಟಿದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ಸೂಚನೆಗಳು ಯಾವಾಗ ಬರುತ್ತವೆನ್ನುವುದು ನನಗೆ ಗೊತ್ತಿಲ್ಲ.

ನನ್ನ ಪ್ರಶ್ನೆ ಏನೆಂದರೆ ಇನ್ನು ೧೫ ದಿವಸದೊಳಗಾಗಿ ೩೦೦೦ ಜನ ಸ್ಥಳೀಯ ಅಭ್ಯರ್ಥಿಗಳನ್ನು ಕೆಲಸದಿಂದ ತೆಗೆದು ಹಾಕುತ್ತಾರೆಂದು ತಿಳಿದು ಬಂದಿದೆ. ಈ ಪ್ರಶ್ನೆ ಪದೇ ಪದೇ ಮನೆಯಲ್ಲಿ ಬರುತ್ತಿದೆ. ಹಿಂದೆ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಿಂದ ಬರುತ್ತಿದೆ, ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಇದ್ದಾಗ ಚರ್ಚೆಯಾಗಿ ಆಗಿನ ಸರ್ಕಾರ ೧೯೬೯ನೇ